# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-8341/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 31/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಕೆ. ಜನಾರ್ಧನ, ಕನ್ನರಪಾಡಿ, ಕಡೆಕಾರು ಅಂಚೆ, ಉಡುಪಿ ತಾಲ್ಲೂಕು ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಕೆ. ಜನಾರ್ಧನ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಶ್ರೀ ಸುರೇಂದ್ರ ಹೆಚ್.ಎಸ್ ಇವರು ಎರಡು ಜಿಲ್ಲೆಗಳಲ್ಲಿ ಅನಧೀಕೃತವಾಗಿ ಬಿಪಿಎಲ್ ಪಡಿತರ ಚೀಟಿ ಹೊಂದಿ ಕಾನೂನುಬಾಹಿರವಾಗಿ ಸರ್ಕಾರದ ಸವಲತ್ತುಗಳನ್ನು ಪಡೆದು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆ ಹಾಗೂ ಮೋಸವೆಸಗಿರುತ್ತಾರೆ. ಇವರು ಬಸವ ಕಲ್ಯಾಣ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗಿರುವ ಬಗ್ಗೆ ಕುಂದಾಪುರ ತಾಲ್ಲೂಕಿನ ಕಂದಾಯ ಇಲಾಖೆಯ ಗಮನಕ್ಕೂ ತಂದಿದ್ದರೂ ಸಹ ತಹಶೀಲ್ದಾರ್‌ರವರು ಈ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಬುಕ್ಲಾಪುರ ಗ್ರಾಮದಲ್ಲಿ ಶ್ರೀ ಸುರೇಂದ್ರ ಹೆಚ್.ಎಸ್ ಸರ್ವೆ ನಂ. 56/1, 56/2, 55/1, 55/3ರಲ್ಲಿ ಒಟ್ಟು 8 ಎಕರೆ 26 ಗುಂಟೆ ಜಮೀನನ್ನು ಜಂಟಿ ಖಾತೆಯಲ್ಲಿ ಹೊಂದಿರುತ್ತಾರೆ. ಇದಲ್ಲದೇ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೆಳ್ವೆ ಗ್ರಾಮದಲ್ಲಿ ಬಿಪಿಎಲ್ ಚೀಟಿ ಹೊಂದಿರುವ ಬಗ್ಗೆ ಮತ್ತು ಆತನ ವಾಸದ ಮನೆಗಳನ್ನು ಮತ್ತು ವಾಹನಗಳನ್ನು ಹೊಂದಿರುವ ಬಗ್ಗೆ ಮಾಹಿತಿ ನೀಡಿದ್ದರೂ ಸಹ ಕುಂದಾಪುರ ತಾಲ್ಲೂಕಿನ ತಹಶೀಲ್ದಾರ್‌ರವರು ಯಾವುದೇ ಕ್ರಮ ಜರುಗಿಸದೇ ಬಸವ ಕಲ್ಯಾಣ ಯೋಜನೆಯಡಿಯಲ್ಲಿ ಅನರ್ಹರಾದ ಶ್ರೀ ಸುರೇಂದ್ರರವರನ್ನು ಫಲಾನುಭವಿಯಾಗಿ ಆಯ್ಕೆ ಮಾಡಿರುತ್ತಾರೆ. ಹಾಗೂ ಹಣವನ್ನು ಮಂಜೂರು ಮಾಡಿರುತ್ತಾರೆ. ಈ ರೀತಿ ಸದರಿ ಶ್ರೀ ಸುರೇಂದ್ರರವರು ಸರ್ಕಾರಕ್ಕೆ ದ್ರೋಹ ಬಗೆದು ಅಪರಾಧವೆಸಗಿರುತ್ತಾರೆ ಎಂಬ ವಿಷಯವನ್ನು ಕುಂದಾಪುರದ ತಹಶೀಲ್ದಾರ್‌ರವರ ಗಮನಕ್ಕೂ ತಂದಿದ್ದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ

ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ, ದೂರು ಅರ್ಜಿಯನ್ನು ಪರಿಶೀಲಿಸಲಾಗಿ ಶ್ರೀ ಹೆಚ್.ಎಸ್. ಸುರೇಂದ್ರ ಪೂಜಾರಿ ಇವರು ತೀರ್ಥಹಳ್ಳಿಯಲ್ಲಿ ದಿ:27/08/2007 ರಲ್ಲಿ ಪಡಿತರ ಚೀಟಿಯನ್ನು ಹೊಂದಿದ್ದು, ಕುಂದಾಪುರ ತಾಲ್ಲೂಕಿನಲ್ಲಿ ದಿ:30/03/2011 ರಿಂದ ಪಡಿತರ ಚೀಟಿಯನ್ನು ಹೊಂದಿರುತ್ತಾರೆ. ಎರಡು ಪಡಿತರ ಚೀಟಿ ವಿತರಣೆಯಾದ ಸಂದರ್ಭದಲ್ಲಿ ಪಡಿತರ ಚೀಟಿ ನಿರ್ವಹಣೆಯ ಕಾರ್ಯವನ್ನು ಖಾಸಗಿ ಸಂಸ್ಥೆಯಾದ ಕೊಮೆಟ್ ನಡೆಸುತ್ತಿದ್ದು, ಆ ಸಮಯದಲ್ಲಿ ತಾನು ತಹಶೀಲ್ದಾರ್‌ರಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, ಉಡುಪಿಯ ಜಿಲ್ಲಾಧಿಕಾರಿಯವರು ತಮ್ಮ ಪತ್ರ ಸಂಖ್ಯೆ: ಪಿಜಿಆರ್‌ಸಿಆರ್37/2014–15 ದಿ:13/08/2014 ರಂತೆ ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಉಡುಪಿ ಇವರ ಪತ್ರ ಸಂಖ್ಯೆ: ಎಫ್‌ಎಸ್‌ಡಿ–ಎಎಲ್‌ಟಿ.ಸಿಆರ್80/2014–15 ದಿ:26/08/2014 ರಂತೆ ಶ್ರೀ ಹೆಚ್.ಎಸ್. ಸುರೇಂದ್ರ ಇವರು ಎರಡು ಪಡಿತರ ಚೀಟಿ ಹೊಂದಿರುವ ಬಗ್ಗೆ ವಿಚಾರಣೆ ನಡೆಸಲು ಸೂಚಿಸಿದ್ದು, ಅದರಂತೆ, ವಿಚಾರಣೆ ನಡೆಸಿ ಈ ಹಿಂದೆ ತೀರ್ಥಹಳ್ಳಿ ತಾಲ್ಲೂಕು ಹುಕ್ಲಾಮರದಲ್ಲಿ ಪಡಿತರ ಚೀಟಿ ಸಂಖ್ಯೆ:ಟಿಐಆರ್14112803 ಅನ್ನು ತಾನು ಹೊಂದಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಹಾಗೂ ಪ್ರಸ್ತುತ ಕುಂದಾಪುರ ತಾಲ್ಲೂಕು ಅಲ್ಬಾಡಿ ಗ್ರಾಮದಲ್ಲಿ ವಾಸವಿದ್ದು, ಕುಂದಾಪುರ ಪಡಿತರ ಚೀಟಿ ಸಂಖ್ಯೆ:ಕೆಡಿಪಿ14160774 ಅನ್ನು ಹೊಂದಿರುವುದಾಗಿಯು ಮತ್ತು ಸದರಿ ಕುಂದಾಪುರ ಪಡಿತರ ಚೀಟಿಯನ್ನು ಮುಂದುವರೆಸಿಕೊಂಡು ಹೋಗಲು ಮತ್ತು ತೀರ್ಥಹಳ್ಳಿ ಪಡಿತರ ಚೀಟಿಯನ್ನು ರದ್ದುಪಡಿಸಬಹುದೆಂದು ವಿಚಾರಣಾ ಸಮಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ, ಬೆಳ್ವೆ ಹಾಗೂ ಆಹಾರ ನಿರೀಕ್ಷಕರು, ಕುಂದಾಪುರ ಇವರ ಸಮಕ್ಷಮ ಹೇಳಿಕೆ ನೀಡಿರುತ್ತಾರೆ. ಅಲ್ಬಾಡಿ ಗ್ರಾಮವು ನಕ್ಸಲೈಟ್ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಪಡಿತರ ಚೀಟಿಯನ್ನು ಉಳಿಸಿ ತೀರ್ಥಹಳ್ಳಿ ತಹಶೀಲ್ದಾರ್‌ರಿಗೆ ಪಡಿತರ ಚೀಟಿ ಸಂಖ್ಯೆ:ಪಿಐಆರ್14112803 ಅನ್ನು ರದ್ದುಪಡಿಸಲು ದಿ:20/10/2014 ರಂದು ವರದಿ ಮಾಡಲಾಗಿರುತ್ತದೆ. ಅದರಂತೆ, ತೀರ್ಥಹಳ್ಳಿಯ ಪಡಿತರ ಚೀಟಿ ರದ್ದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

3. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಶ್ರೀ ಸುರೇಂದ್ರ ಪೂಜಾರಿ ಇವರು ಕಾನೂನುಬಾಹಿರವಾಗಿ ಎರಡು ಪಡಿತರ ಚೀಟಿಯನ್ನು ಹೊಂದಿ ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ ಮತ್ತು ನಷ್ಟವನ್ನು ಸಹ ಉಂಟು ಮಾಡಿರುತ್ತಾರೆ. ಇದಲ್ಲದೇ, ಬಿಪಿಎಲ್ ಪಡಿತರ ಚೀಟಿಯನ್ನು ಆಧರಿಸಿ ಬಸವ ವಸತಿ

ಯೋಜನೆಯಡಿಯಲ್ಲಿಯೂ ಸಹ ಫಲಾನುಭವಿಯಾಗಿ ಆಯ್ಕೆಯಾಗಿ ಹಣದ ಮಂಜೂರಾತಿ ಪಡೆದಿರುತ್ತಾರೆ. ಶ್ರೀ ಸುರೇಂದ್ರರವರು ಜಂಟಿ ಖಾತೆಯಲ್ಲಿ ಒಟ್ಟು 8.50 ಎಕರೆ ಜಮೀನು ಹೊಂದಿದ್ದು, ಸ್ವಲ್ಪ ಅಡಿಕೆ ತೋಟ ಮತ್ತು ಎರಡು ಮನೆಗಳನ್ನು ಹೊಂದಿರುತ್ತಾರೆ. ಆದ್ದರಿಂದ, ಇದೆಲ್ಲವೂ ಎದುರುದಾರರ ಗಮನಕ್ಕೂ ಬಂದಿದ್ದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆ ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಶ್ರೀ ಸುರೇಂದ್ರ ಪೂಜಾರಿರವರು ತೀರ್ಥಹಳ್ಳಿ ತಾಲ್ಲೂಕಿನ ಹಾಗೂ ಕುಂದಾಪುರ ತಾಲ್ಲೂಕಿನ ಎರಡು ಪಡಿತರ ಚೀಟಿಯನ್ನು ಹೊಂದಿದ್ದರೆಂಬುದಾಗಿ ಕಂಡು ಬಂದಿರುತ್ತದೆ. ಸದರಿ ಎರಡು ಪಡಿತರ ಚೀಟಿಗಳಲ್ಲಿ ದೂರುದಾರರು ನೀಡಿದ ದೂರಿನ ನಂತರ ತೀರ್ಥಹಳ್ಳಿಯ ಪಡಿತರ ಚೀಟಿಯನ್ನು ರದ್ದುಗೊಳಿಸಲಾಗಿರುತ್ತದೆ ಹಾಗೂ ಕುಂದಾಪುರದ ಬೆಳ್ವೆ ಗ್ರಾಮದ ಪಡಿತರ ಚೀಟಿಯನ್ನು ಉಳಿಸಿಕೊಳ್ಳಲಾಗಿರುತ್ತದೆ ಎಂದು ಕಂಡು ಬರುತ್ತದೆ. ಆದರೆ, ಎದುರುದಾರರ ಗಮನಕ್ಕೆ ಸದರಿ ಹೆಚ್.ಎಸ್. ಸುರೇಂದ್ರ ಇವರು ಎರಡು ಪಡಿತರ ಚೀಟಿಗಳನ್ನು ಹೊಂದಿದ್ದು, ಸದರಿ ಎರಡು ಪಡಿತರ ಚೀಟಿಗಳು ಸಹ ಬಿಪಿಎಲ್ ಪಡಿತರ ಚೀಟಿಗಳಾಗಿರುತ್ತದೆ ಹಾಗೂ ಸದರಿ ಬಿಪಿಎಲ್ ಕಾರ್ಡ ಹೊಂದಿದ ಸುರೇಂದ್ರರವರು ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗಿ ಸದರಿ ವಸತಿ ಯೋಜನೆಯ ಅನುಕೂಲತೆಯನ್ನು ಪಡೆದು ಮನೆ ಕಟ್ಟಲು ಹಣವನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ. ಮುಂದುವರೆದು, ಸದರಿ ಹೆಚ್.ಎಸ್.ಸುರೇಂದ್ರ ಮತ್ತು ಇವರ ಕುಟುಂಬವು ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ 2010–11ನೇ ಸಾಲಿನಲ್ಲಿ ತನ್ನ ಪತ್ನಿಯಾದ ಶ್ರೀಮತಿ ಸುಶೀಲಾ ಪೂಜಾರ್ತಿ ಇವರ ಹೆಸರಿಗೆ ಸದರಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಯಾಗಿರುತ್ತಾರೆ. ಇದರಿಂದ, ಸದರಿ ಶ್ರೀ ಸುರೇಂದ್ರ ರವರು ಸುಳ್ಳು ಮಾಹಿತಿಗಳನ್ನು ನೀಡಿ ಮೇಲೆ ಹೇಳಿದ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿಯಾಗಿ ತನ್ನ ಹಾಗೂ ತನ್ನ ಪತ್ನಿಯ ಹೆಸರಿನಲ್ಲಿ ಮನೆ ಪಡೆದಿರುವುದು ಕಂಡು ಬರುತ್ತದೆ. ದೂರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಶ್ರೀ ಸುರೇಂದ್ರ ಇವರ ಜಂಟಿ ಖಾತೆಯಲ್ಲಿ ಜಮೀನುಗಳು ಇರುವುದು ಕಂಡು ಬರುತ್ತದೆ. ತೀರ್ಥಹಳ್ಳಿ ತಾಲ್ಲೂಕಿನ ಬುಕ್ಲಾಪುರಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 55ರಲ್ಲಿ 1ಎಕರೆ 14 ಗುಂಟೆ ಜಮೀನು ಇದ್ದು, ಅದು ಶ್ರೀ ಸುರೇಂದ್ರ ಇವರ ಜಂಟಿ ಖಾತೆಯಲ್ಲಿರುವುದು ಕಂಡುಬರುತ್ತದೆ. (ಸದರಿ ಸರ್ವೆ ನಂ.55ರ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ). ಮತ್ತೊಂದು ಆರ್‌ಟಿಸಿ ಪ್ರತಿ ಪರಿಶೀಲಿಸಲಾಗಿ, ಅದು ಬುಕ್ಲಾಪುರಗ್ರಾಮದ ಸರ್ವೆ ನಂ.56ಕ್ಕೆ ಸಂಬಂಧಿಸಿದ್ದಾಗಿದ್ದು, ಅದರ ಒಟ್ಟು ವಿಸ್ತೀರ್ಣ 2 ಎಕರೆ 13 ಗುಂಟೆ ಇರುತ್ತದೆ. ಇದು ಸಹ ಶ್ರೀ ಸುರೇಂದ್ರ ರವರ ಜಂಟಿ ಖಾತೆಯಲ್ಲಿರುವುದು ಕಂಡು ಬರುತ್ತದೆ. (ಸದರಿ ಆರ್‌ಟಿಸಿ ಪ್ರತಿಯನ್ನು

ಹಾಜರುಪಡಿಸಲಾಗಿದೆ). ಬುಕ್ಲಾಪುರಗ್ರಾಮದ ಸರ್ವೆ ನಂ.64ರಲ್ಲಿ ಶ್ರೀ ಸುರೇಂದ್ರ ಇವರಿಗೆ 22 ಸೆಂಟ್ಸ್ ಜಾಗ ಇರುವುದು ಕಂಡು ಬರುತ್ತದೆ. (ಸದರಿ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ). ಹಕ್ಕು ಬದಲಾವಣೆಯ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಬುಕ್ಲಾಪುರಗ್ರಾಮದ ಸವೇ ನಂ.55ಪಿ ಹಾಗೂ ಸರ್ವೆ ನಂ.56ಪಿಗಳ ಜಮೀನುಗಳು ಶ್ರೀ ಸುರೇಂದ್ರ ರವರ ಜಂಟಿ ಖಾತೆಯಲ್ಲಿರುವು ಕಂಡು ಬರುತ್ತದೆ. ಸರ್ವೆ ನಂ.55ಪಿಯ ಜಮೀನಿನ ವಿಸ್ತೀರ್ಣ 1 ಎಕರೆ 14 ಸೆಂಟ್ಸ್ ಆಗಿದ್ದು, ಸರ್ವೆ ನಂ:56ಪಿಯ ವಿಸ್ತೀರ್ಣವು 2 ಎಕರೆ 13 ಗುಂಟೆ ಶ್ರೀ ಸುರೇಂದ್ರರವರ ಜಂಟಿ ಖಾತೆಯಲ್ಲಿರುವುದು ಕಂಡು ಬರುತ್ತದೆ. (ಸದರಿ ಹಕ್ಕು ಬದಲಾವಣೆಯ ರಿಜಿಸ್ಟರ್ ನ ಪ್ರತಿಯನ್ನು ಹಾಜರುಪಡಿಸಲಾಗಿದೆ).

5. ಕಸಬ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ತೀರ್ಥಹಳ್ಳಿ ಇಲ್ಲಿ ಸದರಿ ಸೇವಾ ಸಹಕಾರ ಸಂಘದವರ ವತಿಯಿಂದ ಶ್ರೀ ಸುರೇಂದ್ರ ಪೂಜಾರಿ ಇವರು ಆಯಾ ತಿಂಗಳಲ್ಲಿ ಎಷ್ಟು ಪಡಿತರವನ್ನು ಪಡೆದಿರುತ್ತಾರೆ ಎಂಬುದರ ಬಗ್ಗೆ ಮಾಹಿತಿವುಳ್ಳ ಪಟ್ಟಿಯನ್ನು ಹಾಜರುಪಡಿಸಲಾಗಿದೆ. ಶ್ರೀ ಸುರೇಂದ್ರರವರು ಹುಕ್ಲಾಪುರದಲ್ಲಿ ತನಗೆ 1 ಎಕರೆ ಜಮೀನು ಸರ್ವೆ ನಂ.56ರಲ್ಲಿ ಇರುತ್ತದೆ ಎಂದು ಸದರಿ ಜಮೀನನ್ನು ಹೊರತು ಪಡಿಸಿ ಬೇರೆ ಯಾವುದೇ ಆದಾಯ ಮೂಲ ಇರುವುದಿಲ್ಲ. ಇತರೆ ಜಮೀನುಗಳಾಗಲೀ ಇರುವುದಿಲ್ಲವೆಂದು ತಾಲ್ಲೂಕು ಕಛೇರಿ ತೀರ್ಥಹಳ್ಳಿಗೆ ನೀಡಿರುವ ಅರ್ಜಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ. ದಿ:28/11/2014 ರಂದು ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಉಡುಪಿ ಜಿಲ್ಲೆ ಇವರು ಕುಂದಾಪುರದ ತಹಶೀಲ್ದಾರ್‌ರವರಿಗೆ ಪತ್ರ ಬರೆದು, ತೀರ್ಥಳ್ಳಿಗೆ ಸಂಬಂಧಿಸಿದಂತೆ ಹೊಂದಿದ್ದ ಪಡಿತರ ಚೀಟಿಯನ್ನು ರದ್ದುಗೊಳಿವುವಂತೆ ಕೋರಿ ಪತ್ರ ಬರೆದಿದ್ದು, ಅದರಲ್ಲಿ ತೀರ್ಥಹಳ್ಳಿಯ ಪಡಿತರ ಚೀಟಿಯನ್ನು ರದ್ದುಪಡಿಸುವಂತೆ ಕೋರಿ ತೀರ್ಥಹಳ್ಳಿಯ ತಾಲ್ಲೂಕು ಕಛೇರಿಯ ತಹಶೀಲ್ದಾರ್‌ರವರಗೆ ಪತ್ರ ಬರೆದಿರುತ್ತಾರೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

6. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಶ್ರೀ ಸುರೇಂದ್ರ ಪೂಜಾರಿ ಇವರು ಎರಡು ಪಡಿತರ ಚೀಟಿಗಳನ್ನು ಹೊಂದಿದ್ದು, ಅದರಲ್ಲಿ ಒಂದು ಪಡಿತರ ಚೀಟಿ ತೀರ್ಥಹಳ್ಳಿ ಬುಕ್ಲಾಪುರಕ್ಕೆ ಸಂಬಂಧಿಸಿದ ಪಡಿತರ ಚೀಟಿಯನ್ನು ಹೊಂದಿದ್ದರೂ ಸಹ ಸದರಿ ಶ್ರೀ ಸುರೇಂದ್ರರವರು ಕುಂದಾಪುರ ತಾಲ್ಲೂಕಿನ ಪಡಿತರ ಚೀಟಿಯನ್ನು ಸಹ ಹೊಂದಿರುತ್ತಾರೆ. ಸದರಿ ಪಡಿತರ ಚೀಟಿಗಳು ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಸಂಬಂಧಿಸಿದ್ದಾಗಿರುತ್ತದೆ. ಆದ್ದರಿಂದ, ಅದನ್ನು ರದ್ದುಗೊಳಿಸಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ಪಡಿತರ ಚೀಟಿಯನ್ನು ಊರ್ಜಿತಗೊಳಿಸಿ ತಹಶೀಲ್ದಾರ್‌ರವರು ಆದೇಶಿಸಿರುತ್ತಾರೆ ಎಂಬುದು ಸ್ಪಷ್ಟ ಪಡುತ್ತದೆ. ಆದರೆ, ಸದರಿ ಶ್ರೀ ಸುರೇಂದ್ರರವರು ಬಸವ ವಸತಿ ಯೋಜನೆಯಡಿಯಲ್ಲಿ ತನ್ನ ಪತ್ನಿಯ ಹೆಸರಿನಲ್ಲಿ ಫಲಾನುಭವಿಯಾಗಿ ಆಯ್ಕೆ ಯಾಗಿರುವ ಪಟ್ಟಿಯಲ್ಲಿ

55ನೇ ಕ್ರಮಾಂಕದಲ್ಲಿ ಇರುತ್ತದೆ. (ಸದರಿ ಫಲಾನುಭವಿಯ ಪಟ್ಟಿಯನ್ನು ಹಾಜರುಪಡಿಸಲಾಗಿದೆ). ದೂರುದಾರರು ಹಾಜರುಪಡಿಸಿರುವ ದಾಖಲೆಗಳಲ್ಲಿ ಶ್ರೀ ಸುರೇಂದ್ರರವರ ಜಂಟಿ ಖಾತೆಯಲ್ಲಿ ಸರ್ವೆ ನಂ.55 ಹಾಗೂ 56 ರಲ್ಲಿ ಜಮೀನು ಹೊಂದಿರುವುದು ಕಂಡು ಬಂದಿರುತ್ತದೆ (ಸದರಿ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ). ಇದರಿಂದ, ಶ್ರೀ ಸುರೇಂದ್ರ ಇವರು ತಮ್ಮ ದಿ:12/10/1999ರಲ್ಲಿ ತಹಶೀಲ್ದಾರ್ ಕಛೇರಿಗೆ ನೀಡಿರುವ ಪತ್ರದಲ್ಲಿ ತನಗೆ ಕೇವಲ 1 ಎಕರೆ ತರಿ ಜಮೀನು ಸರ್ವೆ ನಂ.56ರಲ್ಲಿ ಇದ್ದು, ಅದನ್ನು ಹೊರತುಪಡಿಸಿ ತನಗೆ ಯಾವುದೇ ಆದಾಯ ಮೂಲಗಳು ಇಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ಸದರಿ ಶ್ರೀ ಸುರೇಂದ್ರರವರು ಸುಳ್ಳು ಮಾಹಿತಿ ನೀಡಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದಿರುವುದು ಕಂಡು ಬರುತ್ತದೆ. ಹಾಗೂ ಸದರಿ ಪಡಿತರ ಚೀಟಿಗಳನ್ನು ತನ್ನ ಅನುಕೂಲಕ್ಕಾಗಿ ಉಪಯೋಗಿಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿ ಬಸವ ವಸತಿಯೋಜನೆಯಡಿಯಲ್ಲಿ ಆಯ್ಕೆಯಾಗಬೇಕಿದ್ದ ಮತ್ತೋರ್ವ ಬಿಪಿಎಲ್ ಪಡಿತರ ಚೀತಿ ಹೊಂದಿರುವ ವ್ಯಕ್ತಿಗೆ ಮನೆ ಸಿಗದಂತೆ ಮಾಡಿರುತ್ತಾರೆ. ಹಾಗೆಯೇ ಸರ್ಕಾರಕ್ಕೆ ಸುಳ್ಳು ಮಾಹಿತಿಯನ್ನು ನೀಡಿ ಸದರಿ ಬಿಪಿಎಲ್ ಪಡಿತರ ಚೀಟಿಯಲ್ಲಿ ಪಡೆದಿರುವ ಪಡಿತರಗಳ ಪಟ್ಟಿಯನ್ನು ಹಾಜರುಪಡಿಸಿದ್ದು, ಶ್ರೀ ಸುರೇಂದ್ರ ರವರು ಸುಳ್ಳು ಮಾಹಿತಿಯನ್ನು ನೀಡಿ ಪಡೆಯುತ್ತಿದ್ದ ಆಹಾರ ಧಾನ್ಯಗಳ ವಿವರವುಳ್ಳ ಪಟ್ಟಿಯನ್ನು ಪರಿಶೀಲಿಸಿದಲ್ಲಿ 2007ನೇ ಇಸವಿಯಿಂದಲೂ ಸದರಿ ಸುರೇಂದ್ರರವರು ಪಡಿತರವನ್ನು ಪಡೆದಿರುವುದು ಕಂಡು ಬರುತ್ತದೆ. ಹಾಗೂ ಇದರಿಂದ ಅರ್ಹ ಫಲಾನುಭವಿಗೆ ಪಡಿತರ ವಂಚನೆಯಾಗಿರುತ್ತದೆ ಎಂದು ಸ್ಪಷ್ಟ ಪಡುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಶ್ರೀ ಸುರೇಂದ್ರರವರ ಕುಂದಾಪುರ ತಾಲ್ಲೂಕಿನ ಪಡಿತರ ಚೀಟಿಯನ್ನು ಮುಂದುವರೆಸಿರುವುದು ನ್ಯಾಯಯುತವಲ್ಲವೆಂದು ಕಂಡು ಬಂದಿದ್ದು, ಸದರಿ ಪಡಿತರ ಚೀಟಿಯನ್ನು ರದ್ದುಗೊಳಿಸಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

31-3-17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

31/3/17